ಪ್ರಶಾಂತ್ ಮಯ್ಯ, ಸಾಗರ

*ಸಾವಿಗೆ ನಾಳೆ ಬಾ ಎಂದು ಬೋರ್ಡ್ ಹಾಕಲೆ?*




ಪ್ರಯೋಜನವಿಲ್ಲ. ಸಾವು ಅನಕ್ಷರಸ್ಥ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಇಂದಿನ ವಿಜ್ಞಾನಿಗಳಿಗೆ ಉದ್ದದ ಗಡ್ಡ, ಮೀಸೆ ಮತ್ತು ತಲೆಗೂದಲು ಇಲ್ಲದಿರಲು ಕಾರಣವೇನು?*

ವಿಜ್ಞಾನದ ಓದಿಗೆಂದು ಫೀಸ್ ತುಂಬಬೇಕಾದರೆ ಇರುವುದೆಲ್ಲ ಬೋಳಿಸಿಕೊಂಡುಹೋಯಿತಂತೆ.

ಸುಂದರ್, ಬೆಂಗಳೂರು

*ಈಗ ಬೆಂಗಳೂರಿನಲ್ಲಿ ಗಾರ್ದಭಗಳು ಮಾಯವಾಗಿವೆ. ಕಾರಣವೇನಿರಬಹುದು ಸ್ವಾಮಿ?*

ಅರಚುವುದರಲ್ಲಿ ತಮಗಿಂತ ಉತ್ತಮವಾದ ಬ್ರೇಕಿಂಗ್ ನ್ಯೂಸ್ ಮಂದಿಗೆ ಜಾಗ ಬಿಟ್ಟುಕೊಡಲೆಂದು.

ವಿ. ಹಮೀದ್, ವಿಟ್ಲ

*ನಿಮ್ಮನ್ನು ರಾಜಕೀಯಕ್ಕೆ ಕರೆದರೆ ಏನು ಮಾಡುವಿರಿ ಸಾರ್?*

ಬೆಚ್ಚಿಬೀಳುತ್ತೇನೆ.

ಅಮರಯ್ಯಾ ಪತ್ರಿಮಠ, ಸುರಪೂರ

*ಯಾವ ವಿಟಮಿನ್ ಕೊರತೆಯಿಂದ ಪ್ರೇಮ್ ರೋಗ್ ಬರುತ್ತೆ?*



ವಿಟಮಿನ್ ಎ– ಮನೆಯಲ್ಲಿ ಅಫೆಕ್ಷನ್ ಕಡಿಮೆಯಾದಾಗಲೇ ಹೊರಗೆ ಹುಡುಕಾಟ ಆರಂಭ.

ಹೆಚ್. ಗೋಪಿನಾಥ್, ಬಳ್ಳಾರಿ

*ಶ್ರೀರಾಮ ಕ್ಷತ್ರಿಯ, ಶ್ರೀಕೃಷ್ಣ ಗೊಲ್ಲ; ಈಶ್ವರ ವೀರಶೈವ. ಬ್ರಾಹ್ಮಣ ದೇವರು ಯಾರು?*

ಜಾತಿ ಮೀರಿದ ನಿರಾಕಾರಿ; ಮುಸ್ಲಿಮರಿಗೂ ಅವನೇ; ಕ್ರೈಸ್ತರಿಗೂ ಅವನೇ. ಆಕಾರಗಳೆಲ್ಲವೂ ಅವತಾರಗಳಷ್ಟೆ.

ಬೂಕನಕೆರೆ ವಿಜೇಂದ್ರ, ಮೈಸೂರು

*ಶ್ರೀಮಂತರ ಮಕ್ಕಳೇಕೆ ಓದುವುದಿಲ್ಲ?*

ಶುದ್ಧ ಸುಳ್ಳು. ಅವರಷ್ಟು ವಾಟ್ಸ್ಯಾಪ್, ಇಂಟರ್ನೆಟ್ ಮೆಸೇಜುಗಳನ್ನು ಇನ್ನಾರೂ ಓದುವುದಿಲ್ಲ.

ಕುಮಾರ ಚಲವಾದಿ, ಹೊಳೆನರಸಿಪುರ

*ಪತ್ರಿಕೆಯವರು ರಾಜಕಾರಣಿಗಳ ಹುಳುಕು, ಕೊಳಕು, ಥಳಕು ಎಲ್ಲವನ್ನೂ ಬಯಲಿಗೆಳೆದರೂ ಅವರಲ್ಲಿ ಏನೂ ಬದಲಾವಣೆ ಆಗಿಲ್ಲ. ಏಕೆ?*

ಎಷ್ಟು ಎಳೆದರೂ ಮತ್ತೆ ಅಷ್ಟೇ ತುಂಬಿಕೊಳ್ಳುವ ಕೊಳಕಿನ ಅಕ್ಷಯ ಪಾತ್ರೆಗಳಾದ್ದರಿಂದ.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ಪ್ರೀತಿ ಯಾವಾಗಲೂ ಹಸಿರು ಎಂದು ಪ್ರೀತಿಸುವ ಯುವಪ್ರೇಮಿಗಳು ನಂತರ ವಿಚ್ಛೇದನ ಪಡೆಯುವುದೇಕೆ?*

ಮದುವೆಗೆ ಮುಂಚೆ ಚಿಗುರಿನ ಹಸಿರು, ನಂತರ ಜಾರಿಕೆಯ ಪಾಚಿ ಆಗುವುದರಿಂದ.

ಡಿ.ಎಸ್. ಪಂಕಜಸುಬ್ರಮಣ್ಯಂ, ಬೆಂಗಳೂರು

*ಎಷ್ಟೇ ನಿಷ್ಠೆಯಿಂದ ಇದ್ದರೂ ಕಷ್ಟಗಳು ತಪ್ಪುವುದಿಲ್ಲವಲ್ಲ ಸಾರ್...?*

ನಿಷ್ಠೆ ವ್ಯಕ್ತಿಗೋ, ತತ್ವಕ್ಕೋ, ಕಾರ್ಯಕ್ಕೋ? ವ್ಯಕ್ತಿನಿಷ್ಠೆ ಪ್ರಥಮ; ತತ್ವನಿಷ್ಠೆ ಮಧ್ಯಮ; ಕಾರ್ಯನಿಷ್ಠೆ ಉತ್ತಮ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ನಗುವುದಕ್ಕೆ ಮತ್ತು ಅಳುವುದಕ್ಕೆ ಟ್ಯಾಕ್ಸ್ ಇದ್ದಿದ್ದರೆ ಏನಾಗುತ್ತಿತ್ತು ರಾಮ್ ಸರ್?*

ತೆರಿಗೆ ತಪ್ಪಿಸಲು ಕಳ್ಳ ನಗೆ, ಕಳ್ಳ ಅಳುಗಳು ಹೆಚ್ಚಾಗುತ್ತಿದ್ದವು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

*ಹೆಣ್ಣಾಗಿ ಹುಟ್ಟುವುದೇ ಒಂದು ಶಾಪ; ಪಾಪದ ಫಲ ಅನ್ನುತ್ತಾರೆ. ಹೌದಾ ಸಾರ್?*

ಊಹೂಂ. 'ಹೆಣ್ಣಾಗಿ ಹುಟ್ಟುವುದೇ ಶಾಪಿಂಗ್‌ಗೆ'! ವಾಸ್ತವವಾಗಿ ಹೆಣ್ಣು ಗಂಡಿಗೆ ಬಲ; ಗಂಡು ಹೆಣ್ಣಿಗೆ ಎಡ(ವಟ್ಟು)!

ಜಾಕೋಬ್ ಡಿಸೋಜ, ಕುರುವಳ್ಳಿ

*ಜವಾನನಾದವನು ದಿವಾನನಾಗುವುದಕ್ಕೂ, ದಿವಾನನಾದವನು ಜವಾನನಾಗುವುದಕ್ಕೂ ಏನು ವ್ಯತ್ಯಾಸ?*

ಷೇರು ಮಾರ್ಕೆಟ್ಟೇ; ಒಂದೇ ದಿನದಲ್ಲಿ ಅವನು ಅದು, ಇವನು ಇದು ಆಗಬಹದು!

## ಬಹುಮಾನಿತ ಪ್ರಶ್ನೆ

ಎಂ.ಎ. ಕುಮಾರ್, ಬೆಂಗಳೂರು

*ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುವ ಕಾಲ ಬರಬಹುದೆ?*

ಕಾಲವಾದಾಗಲೆಲ್ಲ ಆ ಕಾಲ ಬರುತ್ತಿದೆಯಲ್ಲ! ಶ್ರಾದ್ಧದೂಟದ ಸಮಯದಲ್ಲಿ ಇನ್ನಿಲ್ಲದ ಒಗ್ಗಟ್ಟು!

ರಾಜಶೇಖರರೆಡ್ಡಿ, ಗೌರಿಬಿದನೂರು

*ಒಂದು ವೇಳೆ ಪ್ರಕೃತಿಯಲ್ಲಿ ಮನುಷ್ಯನ ಹುಟ್ಟು ಸಾವು ನಿಂತುಬಿಟ್ಟರೆ ಏನಾಗಬಹುದು?*

ಇರುವವರೆಲ್ಲೂ ಮುದಿಯಾಗಿ, ಸಾಯಲೂ ಆಗದೆ, ಬ್ಯಾಕ್ಟೀರಿಯಾ, ವೈರಸ್‌ಗಳ ಚೀಲಗಳಾಗಬಹುದು!

ಮಹಾವೀರ ಕಾಸರ, ಶಿವಮೊಗ್ಗ

*ತಾಳಿಗೆ ನಾಲ್ಕನೆಯ ಗಂಟು ಹಾಕುವಂತಿದ್ದರೆ ಚೆನ್ನಾಗಿತ್ತು...?*

ಸರಿಯೇ. ಅಂದಿನದಾದರೆ ಧರ್ಮಕ್ಕೊಂದು, ಅರ್ಥಕ್ಕೊಂದು, ಕಾಮಕ್ಕೊಂದು; ಈಗ 'ಆನ್‌ಲೈನ್ ಶಾಪಿಂಗೇ ನಾತಿಚರಾಮಿ' ಸೇರಬೇಕಲ್ಲ!

ಎನ್.ವಿ. ಶ್ರೀನಿವಾಸ್, ಮೈಸೂರು

*ಬೆಕ್ಕುಗಳು ಕಣ್ಣು ಬಿಟ್ಟುಕೊಂಡು ಹಾಲು ಕುಡಿದರೆ ಏನಾಗುತ್ತದೆ?*



ಹಾಲಿನಲ್ಲಿನ ನೀರಿನಂಶವನ್ನು ಕಂಡು ಅಳು ಬಂದು, ಕಣ್ಣೀರು ಹಾಲಿಗೆ ಸೇರಿ, ಹಾಲು ಉಪ್ಪಾಗುತ್ತದೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಹದ್ದಿಗೂ, ಹದ್ದು ಮೀರಿದವರಿಗೂ ಏನು ವ್ಯತ್ಯಾಸ ರಾಮ್?*

ಹದ್ದಿನದು ದೂರದೃಷ್ಟಿ; ಹದ್ದು ಮೀರಿದವರದು ದೂರುದೃಷ್ಟಿ.

ಓಂ ಚನ್ನೇಶ್, ಭದ್ರಾವತಿ

*ಆಯುಧ ಪೂಜೆಯ ದಿನ ಕುಂಬಳಕಾಯಿ ಒಡೆಯಲು ಕಾರಣವೇನು?*

ಅದರ ಗಾತ್ರದ ಕಷ್ಟಗಳು ಅದರ ಆಕಾರದಂತಾಗಿ ಹೊರಟುಹೋಗಲಿ ಎಂದು ಸೂಚಿಸಲು.

■ ರಾಮ್